# ಶೇ(ಶಾ)ಕಿಂಗ್ ಜಮಾನ

ಪುಷ್ಪವತಿಯರಾದ ಹೆಣ್ಣುಮಕ್ಕಳು ಹಿರಿಯರ ಮುಂದೆ ನಿಂತು ಕಿವಿಯ ಲೋಲಾಕುಗಳನ್ನು ಶೇಕ್ ಮಾಡಲೂ ಅಂಜುತ್ತಿದ್ದ ಕಾಲವಿತ್ತು. ಈಗ, ಕೂಸುಗಳ ನರ್ಸರಿ ರೈಮ್ಸ್ ಪ್ರಾರಂಭವಾಗುವುದೇ 'ಶೇಕ್ ಶೇಕ್.. ಶೇಕ್ ಯುವರ್ ಬಾಡಿ... ಇಟ್ ಈಸ್ ಪಾರ್ಟಿ ಟೈಮ್..' ಎಂದು.

■ ಸುಮಾ ರಮೇಶ್



'ಪ್ರಾಕೃತಿಕವಾಗಿ ದೊರಕುವ ಹಣ್ಣು ಹಂಪಲುಗಳನ್ನು ಹಾಗೆಯೇ ತಿನ್ನುವುದು ಪ್ರಕೃತಿ. ಅವುಗಳನ್ನು ಸ್ಮ್ಯಾಶ್ ಮಾಡಿ ದ್ರವರೂಪಿಯಾಗಿಸಿ ಸವಿಯುವುದು ಸಂಸ್ಕೃತಿ. ಹುಳಿ ಬರಿಸಿ ಹೆಂಡವಾಗಿಸಿ ಹೀರುವುದು ವಿಕೃತಿ' ಎಂದು ಜ್ಞಾನಿಗಳು ಹೇಳಿದ್ದನ್ನು ಕೇಳಿದ ನೆನಪು. ಇಂದು ತಾಜಾ ಹಣ್ಣುಗಳನ್ನು ಮಿಕ್ಸಿಯಲ್ಲಿ ರುಬ್ಬಿ ಬನಾನ ಶೇಕ್, ಆಪಲ್ ಶೇಕ್, ಚಿಕ್ಕು ಶೇಕ್, ಮ್ಯಾಂಗೊ ಶೇಕ್... ಎನ್ನುತ್ತಾ ವಿವಿಧ ಬಗೆಯ ಜೂಸಾಗಿಸಿ... ಅದಕ್ಕೊಂದಿಷ್ಟು ಹಾಲು ಬೆರೆಸಿ ಮಿಲ್ಕ್ ಶೇಕಾಗಿಸಿ ಗಾಜಿನ ಬಟ್ಟಲುಗಳಿಗೆ ಬಸಿದು ಬಳಸುವ ಸಂಸ್ಕೃತಿ ಎಲ್ಲೆಡೆ ಇದೆ. ಅಂತೆಯೇ ಅದನ್ನು ಹುಳಿ ಬರಿಸಿ ಗ್ಲಾಸಿಗೆ ಸುರಿದು ನಾಜೂಕಾಗಿ ಡಿಕ್ಕಿ ಹೊಡೆಸಿ ಸವಿದು... ನಂತರ ಶೇಕ್ ಆಗುವ ಪದ್ಧತಿಯೂ ಇದೆ.

'ಶೇಕ್ ವೆಲ್ ಬಿಫೋರ್ ಯೂಸ್' – ಔಷಧಿ ಬಾಟಲುಗಳ ಮೇಲಿನ ಈ ಬರಹವನ್ನು ಎಲ್ಲಾ ಪಾನೀಯಗಳಿಗೂ ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳಲು ಸಾಧ್ಯವಾಗದು. ಕಾಫಿ, ಚಹಾಗಳನ್ನು ಕುಡಿಯುವ ಮುನ್ನ ಶೇಕ್ ಮಾಡಿದರೆ ಗಸಿ ಮೇಲೆ ಬಂದು ಕುಡಿಯಲು ಕಸಿವಿಸಿಯಾಗುವುದು. ಥಂಡಿ ಹವೆಗೆ ಮೈ ಶೇಕಾದಾಗ ಕಾಫಿ, ಚಹಾ, ಕಷಾಯದಂತಹ ಪಾನೀಯಗಳ ಸೇವನೆ ದೇಹವನ್ನು ಬೆಚ್ಚಗಾಗಿಸುವುದು. ಇನ್ನು ಕೆಲವು ಪಾನೀಯಗಳು ದೇಹವನ್ನು ಬೆಚ್ಚಗಾಗಿಸಿದ ನಂತರ ಶೇಕ್ ಶೇಕ್ ಶೇಕ್... ಶೇಕ್ ಯುವರ್ ಬಾಡಿ... ಎನ್ನುತ್ತಾ ವಿಚಿತ್ರ ಫಾರ್ಮ್‌ಗೆ ತೆರೆದುಕೊಳ್ಳುತ್ತವೆ. ಕೈಕಾಲುಗಳ ಅಲೈನ್‌ಮೆಂಟ್‌ನಲ್ಲಿ ವ್ಯತ್ಯಾಸವಾಗಿ ಅವು ಎತ್ತೆತ್ತಲೋ ಸಾಗಿ ಮೆದುಳಿನ ಮಾತನ್ನು ಕಡೆಗಣಿಸತೊಡಗುತ್ತವೆ. ಕೆಲವೊಮ್ಮೆ ಭೂಮಿಯ ತಿರುಗುವಿಕೆಯನ್ನೂ ಗ್ರಹಿಸುವಷ್ಟರ ಮಟ್ಟಿಗಿನ ಅತಿಮಾನುಷ ಶಕ್ತಿಯನ್ನು ಇವು ಸಂಚಯಿಸಿಕೊಡುತ್ತವೆ.

ಇದರಿಂದ, ಬೆಳಗಿನ ಸಮಯ ಗಂಟೆ ಶೇಕಿಸಿ ಆಧ್ಯಾತ್ಮ ಎನ್ನುವವರೂ ಸಂಜೆ ಸಮಯ ಗಾಜಿನ ಬಟ್ಟಲಿನಲ್ಲಿ ಈ ಪರಮಾತ್ಮನ ಆವಾಹನೆಗೆ ತೊಡಗುವರು. ಇವೆಲ್ಲಾ 'ಶೇಕ್ ವೆಲ್ ಆಫ್ಟರ್ ಯೂಸ್' ಕೆಟಗರಿಯವು.

ಎಪ್ಪತ್ತು ಎಂಬತ್ತರ ದಶಕದಲ್ಲಿ ಪ್ರಾರಂಭವಾದ 'ಸಂತೋಷಕ್ಕೆ... ಹಾಡು ಸಂತೋಷಕ್ಕೆ...' ಎಂಬ ವಿನೂತನ ಶೈಲಿಯ ಶೇಕಿಂಗ್ ಸಾಂಗುಗಳ ಹೊಸ ಪ್ರಯೋಗಗಳು ಯುವಜನತೆಯನ್ನು ಸೂಜಿಗಲ್ಲಿನಂತೆ ಸೆಳೆದವು. ಅದೇ ಸಮಯ ಹಿಂದಿಯ 'ಐ ಆಮ್ ಎ ಡಿಸ್ಕೋ ಡ್ಯಾನ್ಸರ್' ನೃತ್ಯ ಹಲವರ ಡಿಸ್ಕ್‌ಗೆ ಹಾನಿ ಮಾಡಿದ್ದು ಸುಳ್ಳಲ್ಲ. ಯಾವುದೇ ಹೊಸ ಪ್ರಯೋಗ ದಿಢೀರನೆ ವಿಶ್ವ ಮಾನ್ಯತೆ ಪಡೆದ ಇತಿಹಾಸವಿಲ್ಲ. ಅಂತೆಯೇ ಹಿರಿಯರು ಆ ಶೇಕುಗಳನ್ನು ಫಿಟ್ಸ್ ಬಂದವರ ಕುಣಿತವೆಂದು ಮೂಗು ಮುರಿದರು. ಆದರೂ ಹಲವು ಸಾಂಪ್ರದಾಯಿಕ ನೃತ್ಯ ಪ್ರಕಾರಗಳಿಗಿಂತ ಸುಲಭದಲ್ಲಿ ದಕ್ಕುತ್ತಿದ್ದ, ಹೆಚ್ಚು ಸಂತೋಷ–ಮನರಂಜನೆ ನೀಡುತ್ತಿದ್ದ ಈ ರೀತಿಯ ಶೇಕಿಂಗ್ ಸಾಂಗುಗಳು ಬಹಳ ಬೇಗನೆ ಜನಪ್ರಿಯತೆ ಪಡೆದವು. ಕೊನೆಗೆ ಚಲನಚಿತ್ರ, ಮದುವೆ ಸಮಾರಂಭಗಳಲ್ಲದೆ ಶಾಲಾ ವಾರ್ಷಿಕೋತ್ಸವದ ವೇದಿಕೆಯನ್ನೂ ಇವು ಅಲ್ಲಾಡಿಸತೊಡಗಿದವು.

'ಜೀವನ ಟಾನಿಕ್ ಬಾಟ್ಲಿ ಕುಡಿಯೋ ಮುಂಚೆ ಅಲ್ಲಾಡ್ಸು... ಅಲ್ಲಾಡ್ಸೂ... ಅಲ್ಲಾಡ್ಸೂ...' ಎನ್ನುತ್ತಾ ಮಿಲಿಯಗಟ್ಟಲೆ ವ್ಯೂಸ್ ಪಡೆದ ಇತ್ತೀಚಿನ ಕನ್ನಡದ ಈ ಗೀತೆಯನ್ನು ಅಭಿಮಾನಿಗಳು ಅಲ್ಲಾಡದಂತೆ ವಿಕ್ಟರಿ ಸ್ಟ್ಯಾಂಡಿನ ಚೌಕದಲ್ಲಿ ಗಟ್ಟಿಯಾಗಿ ನಿಲ್ಲಿಸಿರುವರು. ಮೊದಲ ಬಾರಿಗೆ 'ಅಲ್ಲಾಡ್ಸು... ಅಲ್ಲಾಡ್ಸು...' ಗೀತ ಸಾಹಿತ್ಯವನ್ನು ಕೇಳಿದ ಹಲವು ಹಿರಿಯರು ಅದನ್ನು ಅಲ್ಲಗಳೆದಿದ್ದರು. ಎಪ್ಪತ್ತರ ದಶಕದಲ್ಲಿ 'ಬೆಸುಗೆ' ಚಿತ್ರದ 'ರಾಗದ ಜೊತೆಗೆ ತಾಳದ ಬೆಸುಗೆ...' ಗೀತೆಯಲ್ಲಿ 'ಬೆಸುಗೆ' ಪದ ಅರವತ್ತಕ್ಕೂ ಹೆಚ್ಚು